Kristu Jayanti College
AUTONOMOUS Bengaluru
Accredited 'A' Grade by NAAC | Affiliated to Bangalore University

# DEPARTMENT OF KANNADA
## REPORT ON EVENT

**Inter** and **Intr**a

**Title: NATIONAL SEMINAR 2020:** ಕನ್ನಡ ಸಾಹಿತ್ಯ: ನಾಟಕ, ರಂಗಭೂಮಿ ಮತ್ತು ಸಾಹಿತ್ಯ

Date: 24/01/2020

Classes Attended & Number of students benefited:
II & IV sem BA, B.Sc., B.Com, BBA, and B.C.A, 150 students attended

**List of Resource Person with details:**

**Inauguration Chief Guest :Dr. Mukhya Mantri Chandru, Artist, Indian Film Actor.**

**Valedictory Chief Guest : C. Basavalingaiah, Director, National School of Drama, Govt. of India**

ಕ್ರಿಸ್ತು ಜಯಂತಿ ಕಾಲೇಜು ಪ್ರತಿ ವರ್ಷದಂತೆ ಈ ವರ್ಷವೂ ರಾಷ್ಟ್ರೀಯ ವಿಚಾರ ಸಂಕಿರಣವನ್ನು ೨೪/೦೧/೨೦೨೦ರಂದು ಹಮ್ಮಿಕೊಳ್ಳಲಾಗಿತ್ತು, ರಾಷ್ಟ್ರೀಯ ವಿಚಾರ ಸಂಕಿರಣದ ವಿಷಯವು ಕನ್ನಡ ಸಾಹಿತ್ಯ: ನಾಟಕ, ರಂಗಭೂಮಿ ಮತ್ತು ಸಾಹಿತ್ಯವಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಮುಖ್ಯಮಂತ್ರಿ ಚಂದ್ರು ಅವರು ರಾಷ್ಟ್ರೀಯ ವಿಚಾರ ಸಂಕಿರಣದ ಕೇಂದ್ರ ಬಿಂದುವಾಗಿದ್ದರು, ಮುಖ್ಯಅತಿಥಿಗಳು, ಕಾಲೇಜಿನ ಉಪ ಪ್ರಾಂಶುಪಾಲರಾದ ರೆ. ಡಾ. ಅಗಸ್ಟಿನ್ ಜಾರ್ಜ್ ಅವರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸರ್ವೇಶ್ ಬಿ.ಎಸ್ ಪ್ರೊ. ಚಂದ್ರಶೇಖರ್, ಪ್ರೊ. ಸ್ಯೆಯದ್ ಮುಯಿನ್ ಮತ್ತು ಪ್ರೊ.ರವಿಶಂಕರ್ ಅವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು, ವಿಭಾಗದ ಮುಖ್ಯಸ್ಥರು ಸ್ವಾಗತದ ಮೂಲಕ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು, ಮುಖ್ಯ ಅತಿಥಿಗಳಾದ ಡಾ. ಮುಖ್ಯ ಮಂತ್ರಿ ಚಂದ್ರು ಅವರು ರಂಗಭೂಮಿ ಕಲಾವಿದರಾಗಿ ಅವರ ನಾಟಕ ಮುಖ್ಯಮಂತ್ರಿ ಚಂದ್ರು ಸುಮಾರು ೭೦೦ ಪ್ರದರ್ಶನಗಳನ್ನು ಕಂಡು ಯಶಸ್ವಿಯಾಗಿದೆ, ಭಾರತೀಯ ಚಿತ್ರರಂಗದಲ್ಲಿ ಖಳನಟರಾಗಿ, ಹಾಸ್ಯ ಕಲಾವಿದರಾಗಿ ಸುಮಾರು ೫೦೦ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದು, ಕಿರುತೆರೆಯಲ್ಲೂ ಮಿಂಚಿದ್ದಾರೆ, ಮುಖ್ಯ ಅತಿಥಿಗಳು ರಂಗಭೂಮಿಯ ಪ್ರಾಮುಖ್ಯತೆ, ಭಾಷಾ ವೈವಿಧ್ಯತೆ ಮತ್ತು ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ತಮ್ಮ ಮಾತೃಭಾಷೆ ಬೇರೆಯದಾದರು ಉಪ ಪ್ರಾಂಶುಪಾಲರು ಕನ್ನಡದಲ್ಲೇ ಭಾಷಣವನ್ನು ಮಾಡಿ ತಮ್ಮ ಕನ್ನಡಾಭಿಮಾನವನ್ನು ಅಭಿವ್ಯಕ್ತಿಸಿ, ಭಾಷೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು. ಈ

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿನ ಸಂಶೋಧನಾ ಲೇಖನಗಳ ಪುಸ್ತಕವನ್ನು ಮುಖ್ಯ ಅತಿಥಿಗಳು, ಉಪಪ್ರಾಂಶುಪಾಲರು ಮತ್ತು ವಿಭಾಗದ ಅಧ್ಯಾಪಕರು ಬಿಡುಗಡೆ ಮಾಡಿದರು.

ಗೋಷ್ಠಿ ೧

ಗೋಷ್ಠಿ ೧ರ ಅಧ್ಯಕ್ಷರಾಗಿ ಆಗಮಿಸಿದ್ದ ಪ್ರೊ. ಸಿ.ನಾಗಣ್ಣ ಅವರು ಮೈಸೂರು ವಿಶ್ವವಿದ್ಯಾಲಯದ ತೌಲನಿಕ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರು ಮತ್ತು ಪ್ರಸಾರಾಂಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಇದೇ ಗೋಷ್ಠಿಯ ಸಂಪನ್ಮೂಲ ವ್ಯಕ್ತಿಗಳಾಗಿದ್ದ ಡಾ. ಸತ್ಯನಾರಾಯಣ ಮತ್ತು ಡಾ. ವತ್ಸಲಾ ಮೋಹನ್ ಅವರು ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತ ವ್ಯಕ್ತಿಗಳಾಗಿದ್ದಾರೆ, ಪ್ರೊ. ಸಿ. ನಾಗಣ್ಣ ಅವರ ಅಧ್ಯಕ್ಷತೆಯಲ್ಲಿ ಡಾ. ಸತ್ಯನಾರಾಯಣ ಮತ್ತು ಡಾ. ವತ್ಸಲಾ ಮೋಹನ್ ಅವರು ತಮ್ಮ ಪ್ರಬಂಧದ ವಿಷಯವನ್ನು ಮಂಡಿಸಿದರು. ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊ0ಡರು.

ನ0ತರ ಪ್ರಬಂಧ ಮಂಡಕರಾಗಿ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಅಧ್ಯಾಪಕರುಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಪ್ರಬಂಧವನ್ನು ಸಾದರಪಡಿಸಿದರು.

ಸಮಾರೋಪ ಸಮಾರಂಭ

ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಸಿ.ಬಸಲಿಂಗಯ್ಯ ಅವರು ರಾಷ್ಟಿಯ ನಾಟಕ ಶಾಲೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ದೇಶದ ಹೆಸರಾಂತ ರಂಗಭೂಮಿ ನಿರ್ದೇಶಕರಾಗಿ ಹೆಸರು ಮಾಡಿರುವ ಇವರು ಹಲವಾರು ಪ್ರಸಿದ್ಧ ನಾಟಕಗಳ ನಿರ್ದೇಶನವನ್ನು ಮಾಡಿದ್ದಾರೆ. ವಿದ್ಯಾರ್ಥಿ ಜೀವನಕ್ಕೆ ರಂಗಭೂಮಿಯ ಮಹತ್ವ ಮತ್ತು ಅದರ ಪ್ರಭಾವವನ್ನು ತಿಳಿ ಹೇಳಿ, ವೃತ್ತಿ, ಪ್ರವೃತ್ತಿಯಾಗಿ ರಂಗಭೂಮಿ ಬೆಳೆಯಬೇಕೆಂದು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದರು,

**Outcome :**

ರಾಷ್ಟ್ರೀಯ ವಿಚಾರ ಸಂಕಿರಣದ ಮುಖ್ಯ ಆಶಯ ವಿದ್ಯಾರ್ಥಿಗಳಲ್ಲಿ ಕನ್ನಡ ನಾಟಕ ಮತ್ತು ರಂಗಭೂಮಿಯ ಪ್ರಾಮುಖ್ಯತೆ ಮತ್ತು ಮಹತ್ವವನ್ನು ಹೆಚ್ಚಿಸುವುದು, ಕನ್ನಡ ಸಾಹಿತ್ಯದ ವೈಶಿಷ್ಟಯತೆಗಳನ್ನು ತಿಳಿಯುವುದು ಮತ್ತು ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಕಲಾಭಿರುಚಿಯನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಅಭಿವ್ಯಕ್ತಿಸಲು ಸೂಕ್ತ ವೇದಿಕೆಯಾಯಿತು.

**Feedback:**

ಕನ್ನಡ ಸಾಹಿತ್ಯದ ವಿವಿಧ ಆಯಾಮಗಳ ಕುರಿತಾಗಿ ಇನ್ನಷ್ಟು ವಿಚಾರ ಸಂಕಿರಣಗಳನ್ನು ಆಯೋಜಿಸುವ ಬಗ್ಗೆ ಸಲಹೆ ಸೂಚನೆಗಳನ್ನು ಬಂದ0ತಹ ಸಂಪನ್ಮೂಲ ವ್ಯಕ್ತಿಗಳು ಮತ್ತು ವಿವಿಧ ಕಾಲೇಜುಗಳ ಅಧ್ಯಾಪಕರುಗಳು ಸೂಚಿಸಿದರು.

ಡಾ. ಮುಖ್ಯಮಂತ್ರಿ ಚಂದ್ರು ಮತ್ತು ಸಿ. ಬಸವಲಿಂಗಯ್ಯ ಅವರ  ನುಡಿಗಳು ಪ್ರೋತ್ಸಾಹದಾಯಕವಾಗಿತ್ತು ಮತ್ತು ಇವರು ನೀಡಿದ ಮಾರ್ಗದರ್ಶನ  ಕನ್ನಡ ಸಾಹಿತ್ಯದ ಅಭಿಮಾನವನ್ನು ದುಪ್ಪಟ್ಟುಗೊಳಿಸಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿದ್ದ ಪ್ರೊ. ಸಿ.ನಾಗಣ್ಣ, ಡಾ. ಸತ್ಯನಾರಾಯಣ ಮತ್ತು ಡಾ.ವತ್ಸಲಾ ಮೋಹನ್ ಅವರ ಗಿರೀಶ್ ಕಾರ್ನಾಡರ ವ್ಯಕ್ತಿತ್ವ, ರಂಗಭೂಮಿ ಮತ್ತು ಕಿರುತೆರೆಯ ಕುರಿತಾಗಿ ನೀಡಿದ ಮಾಹಿತಿಯು ವಿದ್ಯಾರ್ಥಿಗಳಲ್ಲಿ ಹುರುಪನ್ನು ಮೂಡಿಸಿತು.

**Photos**



ಮುಖ್ಯ ಅತಿಥಿಗಳಿಂದ, ಉಪಪ್ರಾಂಶುಪಾಲರು ಮತ್ತು ಕನ್ನಡ ವಿಭಾಗದ ಅಧ್ಯಾಪಕರುಗಳಿಂದ ದೀಪ ಬೆಳಗುವ ಕಾರ್ಯಕ್ರಮ




ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಸಂಶೋಧನಾ ಲೇಖನಗಳ ಪುಸ್ತಕ ಬಿಡುಗಡೆ ಸಮಾರಂಭ




*ಸಮಾರೋಪ ಸಮಾರಂಭದಲ್ಲಿ ಸಿ. ಬಸವಲಿಂಗಯ್ಯ, ನಿರ್ದೇಶಕರು, ರಾಷ್ಟ್ರೀÃಯ ನಾಟಕ ಶಾಲೆ*



ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿವಿಧ ಕಾಲೇಜಿನ ಪ್ರಾಧ್ಯಾಪಕರು, ಸಂಶೋಧಕರು ಉಪಪ್ರಾಂಶುಪಾಲರು ಮತ್ತು ಕನ್ನಡ ವಿಭಾಗದೊಂದಿಗೆ

Report prepared by — Head of the Department

SYED MUEN — DR. SARVESH B.S